

ಕ್ಯಾನ್ಸರ್ ಗಡ್ಡೆಗಳನ್ನು ಒಳಗೊಂಡ ಸ್ತನ



ಈ ಪ್ರಪಂಚದಲ್ಲಿ ಒಬ್ಬರಿದ್ದ ಹಾಗೆ ಇನ್ನೊಬ್ಬರಿರುವುದಿಲ್ಲ. ಪ್ರತಿಯೊಬ್ಬರಿಗೂ ಅವವೇ ಅಂಗಗಳಿದ್ದರೂ ಜನರಿಗೆ ಪರಸ್ಪರರ ಗುರುತು ಸಿಗಬೇಕೆಂದರೆ, ಅವವೇ ಅಂಗಗಳ ಗಾತ್ರ, ಉದ್ದ, ಬಣ್ಣ, ಆಕೃತಿ ಭಿನ್ನವಾಗಿರಬೇಕಾಗುತ್ತದೆ. ಹಾಗಾಗಿ ಒಬ್ಬ ಮನುಷ್ಯರ ಅಂಗಗಳು ಯಥಾವತ್ ಇನ್ನೊಬ್ಬರ ಹಾಗಿರಬೇಕೆಂದು ಬಯಸುವುದು ಸಂಪೂರ್ಣ ತಪ್ಪಾಗುತ್ತದೆ. ಎತ್ತರ, ದಪ್ಪ, ಗಿಡ್ಡ, ಅಗಲದ ದೇಹಗಳು, ಕರಿಯ, ಬಿಳಿಯ, ಕಂದು, ಹಳದಿ, ಕೆಂಪು ಚರ್ಮಗಳು, ಕರಿ, ಕಂದು, ಹಸಿರು, ನೀಲಿ, ಹಳದಿ ಅಥವಾ ಈ ಬಣ್ಣಗಳ ಮಿಶ್ರಣವಿರುವ ಕಣ್ಣುಗಳು, ತರಹೇವಾರಿ ಬಣ್ಣದ ಕೂದಲುಗಳು, ಅವುಗಳ ನುಣುಪು ಗುಂಗುರು, ಅಲೆಯ ರೂಪ ಮತ್ತು ಭಿನ್ನತೆಗಳು... ಹೀಗೆ ಪ್ರತಿಯೊಂದರಲ್ಲೂ ಒಬ್ಬರಿಂದ ಇನ್ನೊಬ್ಬರಿಗೆ ವ್ಯತ್ಯಾಸಗಳಿರುತ್ತವೆ.

ಇದೇ ರೀತಿ ಒಬ್ಬರ ಮೂಗು ಇನ್ನೊಬ್ಬರದರಂತೆ ಇರುವುದಿಲ್ಲ. ಒಬ್ಬರ ಚರ್ಮ ಇನ್ನೊಬ್ಬರದಂತೆ ಇರುವುದಿಲ್ಲ. ಇದು ನಾವು ಮನುಷ್ಯರನ್ನು ಬೇರೆ ಬೇರೆಯೆಂದು ಗುರುತಿಸಲು ಪ್ರಕೃತಿಯೇ ಮಾಡಿರುವ ವೈವಿಧ್ಯ, ವೈಶಿಷ್ಟ್ಯ.

ಆದರೆ ಪ್ರತಿ ದೇಶ, ಸಮಾಜ, ಮಾರುಕಟ್ಟೆ ಮತ್ತು ಸೌಂದರ್ಯ ಮೀಮಾಂಸಕರು ಇಂತಹದ್ದು ಹೆಚ್ಚು ಸುಂದರ ಎಂಬ ಅಳತೆಗೋಲನ್ನು ನಿರ್ಮಿಸುವುದು ಅವರವರ ಲಾಭಕ್ಕೆ ಮತ್ತು ಅಭಿರುಚಿಗೆ ತಕ್ಕಂತೆ ಮಾತ್ರ. ಅದೇ ಅಭಿರುಚಿಗಳು ಇನ್ನೊಂದು ದೇಶ ಮತ್ತು ಸಮಾಜದಕ್ಕೆ ಹೊಂದಿಕೆಯಾಗದಿರಬಹುದು. ಉದಾಹರಣೆಗೆ ತುಂಬು ಮೈಮಾಟದ ಹೆಣ್ಣೊಬ್ಬಳು ಭಾರತೀಯ ಮತ್ತು ಆಫ್ರಿಕಾದ ಗಂಡುಗಳಿಗೆ ಪರಮ ಸುಂದರಿಯರಂತೆ ಕಾಣಿಸಿದರೆ ಇನ್ನೊಂದು ದೇಶ ಅಥವಾ ಸಮಾಜಕ್ಕೆ ಅದು ‘ತುಸು ದಪ್ಪ’ ಎನ್ನಿಸಬಹುದು. ಜಪಾನಿಯರಿಗೋ, ಮಂಗೋಲಿಯನ್ನರಿಗೋ ಸುಂದರ ಎನ್ನಿಸುವ ಸಪೂರ ದೇಹದ ಹುಡುಗಿಯೊಬ್ಬಳು ಪಾಶ್ಚಾತ್ಯರಿಗೆ ‘ಸಪಾಟು’ ಎನ್ನಿಸಬಹುದು.

ವೈಜ್ಞಾನಿಕವಾಗಿ ಹೇಳುವುದಾದರೆ ಮನುಷ್ಯರ ಕಣ್ಣಿಗೆ ಸುಂದರ ಎನ್ನಿಸುವವರು ಸಾಮಾನ್ಯವಾಗಿ ಸಮಪ್ರಮಾಣದ ಅಂಗಾಂಗಗಳನ್ನು ಹೊಂದಿರುತ್ತಾರೆ. ಆದರೆ, ಸಂಪೂರ್ಣ ಸಮಪ್ರಮಾಣ ಎನ್ನುವುದು ಸೃಷ್ಟಿಯಲ್ಲಿಲ್ಲ. ನಮ್ಮ ಕಣ್ಣಿಗೆ ಕೆಲವು ಸಣ್ಣ ವ್ಯತ್ಯಾಸಗಳು ಕಾಣುವುದೂ ಇಲ್ಲ. ಹಾಗಾಗಿ, ಇದ್ದದ್ದರಲ್ಲೇ ಹೆಚ್ಚು ಸಮಾನ ಪ್ರಮಾಣ ಬದ್ಧತೆಯನ್ನು ಹೊಂದಿರುವವರು ಸುಂದರವಾಗಿ ಕಾಣಿಸುತ್ತಾರೆ. ಒಬ್ಬನೇ ವ್ಯಕ್ತಿಯ ಎರಡು ಕಣ್ಣುಗಳ ಅಳತೆಯಲ್ಲಿ ವ್ಯತ್ಯಾಸವಿರುತ್ತದೆ, ಮೂಗಿನ ಹೊರಳೆಗಳಲ್ಲಿ ವ್ಯತ್ಯಾಸವಿರಬಹುದು. ಎರಡು ಕಿವಿಗಳ ನಡುವೆ ಕೂಡ ವ್ಯತ್ಯಾಸವಿರಬಹುದು. ಅಂತೆಯೇ ಹೆಂಗಸರ ಸ್ತನಗಳ ನಡುವೆ ಕೂಡ ವ್ಯತ್ಯಾಸವಿರುತ್ತದೆ. ಅವೆರಡೂ ಸಂಪೂರ್ಣ ಸಮಪ್ರಮಾಣದಲ್ಲಿರದೇ ಹೋಗಬಹುದು. ವಯಸ್ಸಾದಂತೆಲ್ಲ ಸ್ತನಗಳ ಅಳತೆಯೂ ಬದಲಾಗುತ್ತ ಹೋಗುತ್ತದೆ. ಇದು ಕೂಡ ಸಹಜ. ಈ ಬಗ್ಗೆ ಗಾಬರಿಯ ಅಗತ್ಯವಿಲ್ಲ.

ಆದರೆ, ಕೆಲವೊಂದು ಸ್ತನ ಬದಲಾವಣೆಗಳ ಬಗ್ಗೆ ಅರಿವಿರಬೇಕು. ಅವುಗಳನ್ನು ಆಗಾಗ